# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2161

ಸದಸ್ಯರ ಹೆಸರು : ಶ್ರೀ ಸುನೀಲ್ ವಲ್ಯಾಪುರ್

ಉತ್ತರಿಸುವ ಸಚಿವರು : ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವರು

ಉತ್ತರಿಸುವ ದಿನಾಂಕ : 18.03.2022.

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ. | ಕಲ್ಯಾಣ ಕರ್ನಾಟಕದ ಜಿಲ್ಲೆಗಳಲ್ಲಿರುವ ಬಸ್ಸುಗಳ ಸಂಖ್ಯೆ ಎಷ್ಟು; ಅವುಗಳಲ್ಲಿ ಹೊಸ ಬಸ್ಸುಗಳ ಹಾಗೂ ಹಳೆ ಬಸ್ಸುಗಳ ಸಂಖ್ಯೆ ಎಷ್ಟು; (ವಾರ್ಷಿಕವಾಗಿ ಪ್ರಯಾಣಿಸುತ್ತಿರುವ ಪ್ರಯಾಣಿಕರ ಸಂಖ್ಯೆ ಎಷ್ಟು | ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದಲ್ಲಿ ಫೆಬ್ರುವರಿ-2022ರ ಮಾಹೆಯ ಅಂತ್ಯದಲ್ಲಿ ಒಟ್ಟಾರೆ 4513 ಬಸ್ಸುಗಳಿವೆ.<br><br>9.00 ಲಕ್ಷ ಕಿ.ಮೀ.ಗಿಂತ ಕಡಿಮೆ ಕ್ರಮಿಸಿರುವ 2834 ಹಾಗೂ 9.00 ಲಕ್ಷ ಮತ್ತು ಅದಕ್ಕಿಂತ ಹೆಚ್ಚು ಕಿ.ಮೀ. ಕ್ರಮಿಸಿರುವ 1679 ವಾಹನಗಳು ಇರುತ್ತವೆ.<br><br>ಕ.ಕ.ರ.ಸಾ.ನಿಗಮದ ಬಸ್ಸುಗಳಲ್ಲಿ ವಾರ್ಷಿಕವಾಗಿ 13.58 ಲಕ್ಷ ಜನ ಪ್ರಯಾಣಿಕರು ಪ್ರಯಾಣಿಸುತ್ತಿದ್ದಾರೆ. |
| ಆ. | ಕಲ್ಯಾಣ ಕರ್ನಾಟಕ ಜಿಲ್ಲೆಗಳಿಗೆ ಇನ್ನೂ ಹೊಸ ಬಸ್ಸುಗಳನ್ನು ಒದಗಿಸುವ ವಿಚಾರ ಸರ್ಕಾರದ ಮುಂದಿದೆಯೇ; ಇದ್ದಲ್ಲಿ; (ಸಂಪೂರ್ಣ ಮಾಹಿತಿ ನೀಡುವುದು) | ನಿಗಮದಲ್ಲಿ ಮುಂದಿನ 2022-23ನೇ ಆರ್ಥಿಕ ಸಾಲಿನಲ್ಲಿ ಒಟ್ಟು 650 ಹೊಸ ವಾಹನಗಳನ್ನು ಸೇರ್ಪಡೆಗೊಳಿಸುವ ಕಾರ್ಯಯೋಜನೆ ಇದ್ದು, ಹೊಸ ವಾಹನಗಳ ಖರೀದಿ ನಂತರ ಅಗತ್ಯಕ್ಕೆ ತಕ್ಕಂತೆ ಎಲ್ಲ ಜಿಲ್ಲೆಗಳಿಗೆ ಹೊಸ ವಾಹನಗಳನ್ನು ಒದಗಿಸಲು ಕ್ರಮ ಕೈಗೊಳ್ಳಲಾಗುವುದು. |
| ಇ. | ಕಲ್ಯಾಣ ಜಿಲ್ಲೆಗಳಲ್ಲಿ ಪ್ಯಾಸೆಂಜರ್ ಸಾಗಿಸುವ ವಾಹನಗಳ ಸಂಖ್ಯೆ ಎಷ್ಟು; ಅವುಗಳಲ್ಲಿ ಪರವಾನಿಗೆ ಪಡೆದ ವಾಹನಗಳೆಷ್ಟು; ಮತ್ತು ಪರವಾನಿಗೆ ಪಡೆಯದಿರುವ ವಾಹನಗಳೆಷ್ಟು; ಪರವಾನಿಗೆ ಇಲ್ಲದೆ ಪ್ರಯಾಣಿಕರನ್ನು ಸಾಗಿಸುತ್ತಿರುವ ವಾಹನಗಳ ವಿರುದ್ಧ ಸರ್ಕಾರ ಕೈಗೊಂಡಿರುವ ಕ್ರಮಗಳೇನು; (ವಿವರ ನೀಡುವುದು) | ಕಲ್ಯಾಣ ಜಿಲ್ಲೆಗಳಲ್ಲಿ ಪ್ಯಾಸೆಂಜರ್ ಸಾಗಿಸುವ ವಾಹನಗಳ ಸಂಖ್ಯೆ ಅವುಗಳಲ್ಲಿ ಪರವಾನಿಗೆ ಪಡೆದ ವಾಹನಗಳು ಮತ್ತು ಪರವಾನಿಗೆ ಪಡೆಯದಿರುವ ವಾಹನಗಳ ವಿವರವನ್ನು ಈ ಕೆಳಕಂಡಂತಿದೆ:<br><br>**ಪ್ಯಾಸೆಂಜರ್ ಸಾಗಿಸುವ ವಾಹನಗಳ ಸಂಖ್ಯೆ**: 81,903<br>**ಪರವಾನಿಗೆ ಪಡೆದ ವಾಹನಗಳು**: 69,428<br>**ಪರವಾನಿಗೆ ಪಡೆಯದಿರುವ ವಾಹನಗಳ**: 12,475<br><br>ಇವುಗಳಲ್ಲಿ ಹೆಚ್ಚಿನ ವಾಹನಗಳ ಮಾಲೀಕರು ರಹದಾರಿಗಳನ್ನು ಅಧ್ಯರ್ಪಣೆ ಮಾಡಿರುತ್ತಾರೆ ಮತ್ತು ವಾಹನಕ್ಕೆ ತೀರುವಳಿ ಪತ್ರ ಪಡೆದುಕೊಂಡು ಬೇರೆ ಪ್ರದೇಶಕ್ಕೆ ತೆರಳ ಬೇಕಾದಲ್ಲಿ ರಹದಾರಿ ಅಧ್ಯರ್ಪಣೆ ಮಾಡಬೇಕಾಗುತ್ತದೆ. ಅಂತಹ ವಾಹನಗಳು ಸಹ ಪರವಾನಗಿ ಹೊಂದಿರದ ಪ್ರಯಾಣಿಕರ ವಾಹನಗಳ ಸಂಖ್ಯೆಗಳಲ್ಲಿ ಸೇರ್ಪಡೆಯಾಗಿರುತ್ತವೆ. ರಹದಾರಿಯಿಲ್ಲದೆ ಪ್ರಯಾಣಿಕರನ್ನು ಸಾಗಿಸುತ್ತಿರುವ ವಾಹನಗಳ ವಿರುದ್ಧ ಇಲಾಖೆಯಿಂದ ನಿರಂತರವಾಗಿ ಕ್ರಮ ಕೈಗೊಳ್ಳಲಾಗುತ್ತಿದೆ. ಕಳೆದ ಮೂರು ವರ್ಷಗಳಲ್ಲಿ ರಹದಾರಿಯಿಲ್ಲದೆ ಪ್ರಯಾಣಿಕರನ್ನು ಸಾಗಿಸಿರುವ 1,113 ವಾಹನಗಳ ವಿರುದ್ಧ ಪ್ರಕರಣ ದಾಖಲಿಸಿ ರೂ.45,22,910/-ಗಳ ದಂಡವನ್ನು ವಸೂಲು ಮಾಡಲಾಗಿರುತ್ತದೆ. ರಹದಾರಿಯಿಲ್ಲದೆ ಸಂಚರಿಸುತ್ತಿರುವ ವಾಹನಗಳ ವಿರುದ್ಧ ಇಲಾಖೆಯಿಂದ ಕಠಿಣ ಕ್ರಮ ಕೈಗೊಳ್ಳಲಾಗುತ್ತಿದೆ. ಸಾರಿಗೆ ಇಲಾಖೆಯಲ್ಲಿ ಮೋಟಾರು ವಾಹನ ನಿರೀಕ್ಷಕರು ಹಾಗೂ |

| | | |
|---|---|---|
| | | ಹಿರಿಯ ಮೋಟಾರು ವಾಹನ ನಿರೀಕ್ಷಕರ ಒಟ್ಟು 644 ಮಂಜೂರಾದ ಹುದ್ದೆಗಳಿದ್ದು, ಅವುಗಳ ಪೈಕಿ ಕೇವಲ 208 ಹುದ್ದೆಗಳು ಮಾತ್ರ ಭರ್ತಿಯಾಗಿದ್ದು, 436 ಹುದ್ದೆಗಳು ಖಾಲಿ ಇವೆ. ಆದಾಗ್ಯೂ ಸಹ ಲಭ್ಯವಿರುವ ಸದರಿ ಕಾರ್ಯನಿರ್ವಾಹಕ ಸಿಬ್ಬಂದಿಗಳನ್ನು ಬಳಸಿಕೊಂಡು ಪ್ರವರ್ತನ ಚಟುವಟಿಕೆಗಳನ್ನು ಕೈಗೊಳ್ಳಲಾಗುತ್ತಿದೆ. |
| ಈ. | ಕಲಬುರಗಿ ಜಿಲ್ಲೆಯಲ್ಲಿ ಪ್ರಾದೇಶಿಕ ಸಾರಿಗೆ ಕಛೇರಿ (ಆರ್.ಟಿ.ಓ) ಯಿಂದ ವಾಹನಗಳಿಗೆ ಪರವಾನಿಗೆ ಪಡೆದು ಒಂದೇ ಅನುಮತಿ (ಪರ್ಮಿಟ್) ಪತ್ರದ ಆಧಾರದ ಮೇಲೆ ಹಲವಾರು ವಾಹನಗಳನ್ನು ಓಡಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; (ಸಂಪೂರ್ಣ ಮಹಿತಿ ನೀಡುವುದು) | ಕಲಬುರಗಿ ಜಿಲ್ಲೆಯ ಎಲ್ಲಾ ಮಾರ್ಗಗಳು (ರಸ್ತೆಗಳು) ರಾಷ್ಟ್ರೀಕೃತಗೊಂಡಿದ್ದು, ಇಲ್ಲಿ ಯಾವುದೇ ಖಾಸಗಿ ಮಜಲು ವಾಹನಗಳಿಗೆ ರಹದಾರಿ ನೀಡುತ್ತಿಲ್ಲ ಹಾಗೂ ಈ ಕಲಬುರ್ಗಿ ಜಿಲ್ಲೆಯಲ್ಲಿ ಸಂಚರಿಸುವ ಇತರೆ ಪ್ರಯಾಣಿಕರ ವಾಹನಗಳು ಒಂದೇ ಸಂಖ್ಯೆ, ಒಂದಕ್ಕಿಂತ ಹೆಚ್ಚಿನ ವಾಹನಗಳನ್ನು ಹೊಂದಿರುವುದಿಲ್ಲ. |
| ಉ. | ಕಲಬುರಗಿ ಜಿಲ್ಲೆಯಲ್ಲಿ ಕಳೆದ ಮೂರು ವರ್ಷಗಳಿಂದ ಈ ರೀತಿಯ ನಿಯಮ ಉಲ್ಲಂಘನೆಯಾದ ಪ್ರಕರಣಗಳೆಷ್ಟು; ಈ ತರಹದ ಕಾನೂನು ಉಲ್ಲಂಘನೆಯ ಪ್ರಕರಣಗಳ ಮೇಲೆ ಸರ್ಕಾರ ಯಾವ ಕ್ರಮಗಳನ್ನು ಕೈಗೊಳ್ಳಲಾಗಿದೆ? (ವಿವರ ನೀಡುವುದು) | ಅಂತಹ ಯಾವುದೇ ಪ್ರಕರಣಗಳು ಕಂಡು ಬಂದಿರುವುದಿಲ್ಲ. |

ಸಂಖ್ಯೆ: ಟಿಡಿ 114 ಟಿಸಿಕ್ಯೂ 2022

(ಬಿ.ಶ್ರೀರಾಮುಲು)
ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ
ಕಲ್ಯಾಣ ಸಚಿವರು